ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-65

ಪಟ್ರೇನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ:10.02.15

ಈ ವಾರದ ಮುನ್ಸೂಚನೆ (11-02-15 to 15.02.15 ವರೆಗೆ)

ನಿಯತಾಂಕಗಳು	11.02.15	12.02.15	13.02.15	14.02.15	15.02.15
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	28	29	30	30	30
ಕನಿಷ್ಠ ಉಷ್ಣಾಂಶ (ಡಿ.ಸೆ.)	15	14	15	16	17
ಮೋಡ (ಪ್ರಮಾಣ)	0	0	0	0	3
ಅರ್ದ್ರತೆ ೭.೨೦ ಬೆ (ಶೇ)	69	67	67	66	69
ಅರ್ದ್ರತೆ ೨.೨೦ ಮ (ಶೇ)	35	30	38	30	31
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	4	5	5	4
ಗಾಳಿಯ ದಿಕ್ಕು (ಡಿಗ್ರಿ)	105	120	130	175	160

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಒಣಹವೆ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶವು 28.0-30.0°C ಮತ್ತು ಕನಿಷ್ಠ 14-17°C ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 66-69% ಇದ್ದು, ಮಧ್ಯಾಹ್ನ 30-38% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 4-5 ಕಿ.ಮೀ.ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಸಾಮಾನ್ಯ ಸೂಚನೆಗಳು:

- ಹಣ್ಣಿನ ಮರಗಳ ತೋಟದಲ್ಲಿ (ಮಾವು, ಸೀಬೆ) ನೆಲಕ್ಕೆ ತಾಕುವ ರೆಂಬೆ ಕೊಂಬೆಗಳನ್ನು ಕತ್ತರಿಸಿ ಕೀಟ ರೋಗಗಳಿಂದ ರಕ್ಷಿಸುವುದು.
- ಕಟಾವು ಮಾಡಿದ ಧಾನ್ಯಗಳನ್ನು ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿ ಶೇಖರಣೆ ಮಾಡುವುದು.

ಫೆಬ್ರವರಿ ತಿಂಗಳಲ್ಲಿ ಬೆಳೆಯಬಹುದಾದ ಬೆಳೆ ಹಾಗೂ ತಳಿಗಳು:

ಸೂರ್ಯಕಾಂತಿ: ಮಾರ್ಡೆನ್, ಹೈಬ್ರಿಡ್ ತಳಿಗಳು: ಕೆ.ಬಿ.ಎಸ್.ಹೆಚ್-೧,೪೧, ೪೨,೪೪.

ಶೇಂಗಾ: ಟಿ.ಎಂ.ವಿ-೨, ಜೆ.ಎಲ್-೨೪, ಜಿ.ಪಿ.ಬಿ.ಡಿ-೪, ಚಿಂತಾಮಣಿ-೨ (ಕೆ.ಸಿ.ಹೆಚ್-೨).

ರಾಗಿ: ಇಂಡಾಫ್ಲ್-೫, ಇಂಡಾಫ್ಲ್-೮, ಜಿ.ಪಿ.ಯು-೨೮, ಜಿ.ಪಿ.ಯು-೪೮,

ಪಾಪ್‌ಕಾರ್ನ್: ಅಂಬರ್.

ಅಲಸಂದೆ: ಸಿ-೧೫೨, ಪಿ.ಕೆ.ಬಿ.-೪ (ತರಕಾರಿಗಾಗಿ)

ಕೋಳಿ ಸಾಕಣೆ ಹಾಗೂ ರೇಷ್ಮೆ ಕೃಷಿ: ಚಳಿಯಿಂದ ರಕ್ಷಿಸಲು ಶಾಖದ ವ್ಯವಸ್ಥೆ ಕೊಡಬೇಕು

ಸಸ್ಯ ಸಂರಕ್ಷಣೆ:

ಒಣ ಹವೆ ಇರುವುದರಿಂದ ಬೂದಿ ರೋಗ ಹರಡುವ ಸಾಧ್ಯತೆ ಇರುವುದರಿಂದ ಸೂಕ್ತ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು. ಮಾವಿನ ಬೆಳೆಯಲ್ಲಿ ಬೂದು ರೋಗ ಕಂಡುಬಂದರೆ, ಸಲ್ಫಿಕ್ಸ್ ಅಥವಾ ಮೈಕ್ಲೊಬ್ಯುಟನಾಲ್ ಅನ್ನು ಬಿಸಿಲು ಕಡಿಮೆ ಇರುವ ಸಮಯದಲ್ಲಿ ಸಿಂಪಡಣೆ ಮಾಡಬೇಕು.

ಆಲೂಗಡ್ಡೆ: ಕೊನೆ ಅಂಗಮಾರಿ ರೋಗ ತೀವ್ರವಾಗಿ ಕಂಡುಬಂದರೆ ಸೈಮೊಕ್ಸಾನಿಲ್+ಮ್ಯಾಂಕೊಜೆಬ್ ಅಥವಾ ರಿಡೊಮಿಲ್ ಗೋಲ್ಡ್ (೨ ಗ್ರಾಂ ಪ್ರತಿ ಲೀಟರ್ ನೀರಿಗೆ) ಅನ್ನು ಸಿಂಪಡಿಸಿ.

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು